

ಶ್ರೀ ಸರಸ್ವತಿ ವಿದ್ಯಾಮಂದಿರ ಮತ್ತು ಮಂಗಳ ವಿದ್ಯಾಕೇಂದ್ರ, ಮಾಗಡಿ



ಶ್ರೀ ವೀಣಾ ಮಕ್ಕಳ ಮಂದಿರ, ತ್ಯಾಮಗೊಂಡ್ಲು



ಶ್ರೀ ಮಂಗಳ ವಿದ್ಯಾಮಂದಿರ, ದೊಡ್ಡಬಳ್ಳಾಪುರ



ಶ್ರೀ ಗಾಯತ್ರಿ ವಿದ್ಯಾಮಂದಿರ, ಹೊಸಕೋಟೆ



ಶ್ರೀ ಶಾರದಾ ವಿದ್ಯಾಮಂದಿರ, ವರ್ತೂರು



ಶ್ರೀ ಹಂಸವಾಹಿನಿ ಮಕ್ಕಳ ಮಂದಿರ, ಕನಕಪುರ



ಮಂಗಳ ವಿದ್ಯಾಮಂದಿರ, ಯಲಹಂಕ



ಶ್ರೀ ಭಾರತಿ ವಿದ್ಯಾನಿಕೇತನ, ಅತ್ತಿಬೆಲೆ

Cover Page Last

# ಶ್ರೀ ಮಂಗಳ ಶಿಕ್ಷಣ ಸಮಿತಿ (ರಿ)

ಬೆಂಗಳೂರು ನಗರ, ಗ್ರಾಮಾಂತರ ಮತ್ತು ರಾಮನಗರ ಜಿಲ್ಲೆ.

www.srimangala.org Email: srimangala.bng@gmail.com

## ವಾರ್ಷಿಕ ವರದಿ 2019-20

ನಂ. 20, 'ಎ' ಸೆಕ್ಟರ್, ಸಂದೀಪ್ ಉನ್ನಿಕೃಷ್ಣನ್ ರಸ್ತೆ, ಯಲಹಂಕ ನ್ಯೂಟೌನ್,
ಬೆಂಗಳೂರು-64

Cover Page First

**ಶ್ರೀ ಮಂಗಳ ಶಿಕ್ಷಣ ಸಮಿತಿಯು 1982-83 ರಲ್ಲಿ ಈ ಕೆಳಕಂಡ ಧ್ಯೇಯೋದ್ದೇಶಗಳೊಂದಿಗೆ ಪ್ರಾರಂಭವಾಯಿತು.**

* ಭಾರತೀಯ ಪದ್ಧತಿಯ ಶಿಕ್ಷಣವನ್ನು ಪ್ರಚಾರ ಮಾಡುವುದು ಮತ್ತು ಅನುಷ್ಠಾನಕ್ಕೆ ತರುವುದು.
* ಪೂರ್ವ ಪ್ರಾಥಮಿಕ, ಹಿರಿಯ ಪ್ರಾಥಮಿಕ, ಪ್ರೌಢಶಾಲೆ ಮತ್ತು ಅಧ್ಯಾಪಕರ ತರಬೇತಿ ಕೇಂದ್ರಗಳು ಹಾಗು ತಾಂತ್ರಿಕ ಶಿಕ್ಷಣ ಸಂಸ್ಥೆಗಳನ್ನು ನಡೆಸುವುದು.
* ಮಕ್ಕಳಲ್ಲಿ ಸುಪ್ತವಾಗಿರುವ ಪ್ರತಿಭೆಯನ್ನು ಬೆಳಕಿಗೆ ತರಲು ಅವಶ್ಯಕವಾದ ಶಿಕ್ಷಣವನ್ನು ನೀಡುವುದು.
* ಸಾಂಸ್ಕೃತಿಕ, ಶೈಕ್ಷಣಿಕ, ಸಾಮಾಜಿಕ ವಿಚಾರಗಳ ಪ್ರಕಟಣೆಗಳನ್ನು ಹೊರತರುವುದು.
* ಮಕ್ಕಳಲ್ಲಿ ರಾಷ್ಟ್ರಾಭಿಮಾನವನ್ನು ಬೆಳೆಸಿ ರಾಷ್ಟ್ರದ ಯೋಗ್ಯ ನಾಗರೀಕರನ್ನಾಗಿ ಮಾಡುವುದು.
* ಸಾಂಸ್ಕೃತಿಕ, ಶೈಕ್ಷಣಿಕ, ಸಾಮಾಜಿಕ ವಿಷಯದ ಮೇಲೆ ವಿಚಾರ ಸಂಕೀರ್ಣ ಮತ್ತು ಚರ್ಚೆಗಳನ್ನು ನಡೆಸುವುದು.
* ಸಂಸ್ಥೆಯ ಧ್ಯೇಯ ಸಾಧನೆಗೆ ಅವಶ್ಯಕವಾದ ಕಾರ್ಯಕ್ರಮ ರೂಪಿಸಿ ಅದನ್ನು ಕಾರ್ಯಗತ ಮಾಡುವುದು.
* ಸಂಸ್ಥೆಯ ಧ್ಯೇಯಕ್ಕೆ ಅನುಗುಣವಾದ ವಿದ್ಯಾಸಂಸ್ಥೆಗಳನ್ನು ವಹಿಸಿಕೊಟ್ಟಲ್ಲಿ ಅವುಗಳನ್ನು ನಡೆಸುವುದು.

## ಶ್ರೀ ಮಂಗಳ ಶಿಕ್ಷಣ ಸಮಿತಿ ನಡೆಸುತ್ತಿರುವ ಶಾಲೆಗಳು

### ಪೂರ್ವ ಪ್ರಾಥಮಿಕ ಮತ್ತು ಹಿರಿಯ ಪ್ರಾಥಮಿಕ ಶಾಲೆಗಳು

1. ಶ್ರೀ ಸರಸ್ವತಿ ವಿದ್ಯಾಮಂದಿರ ಮತ್ತು ಮಂಗಳ ವಿದ್ಯಾಕೇಂದ್ರ, ಮಾಗಡಿ, ರಾಮನಗರ ಜಿಲ್ಲೆ.
2. ಶ್ರೀ ವೀಣಾ ಮಕ್ಕಳ ಮಂದಿರ, ತ್ಯಾಮಗೊಂಡ್ಲು, ನೆಲಮಂಗಲ ತಾ, ಬೆಂ.ಗ್ರಾ.
3. ಶ್ರೀ ಮಂಗಳ ವಿದ್ಯಾಮಂದಿರ, ದೊಡ್ಡಬಳ್ಳಾಪುರ, ಬೆಂ. ಗ್ರಾ. ಜಿಲ್ಲೆ.
4. ಶ್ರೀ ಗಾಯತ್ರಿ ವಿದ್ಯಾಮಂದಿರ, ಹೊಸಕೋಟೆ, ಬೆಂ. ಗ್ರಾ. ಜಿಲ್ಲೆ..
5. ಶ್ರೀ ಶಾರದ ವಿದ್ಯಾಮಂದಿರ, ವರ್ತೂರು, ಬೆಂ. ನಗರ ಜಿಲ್ಲೆ.





6. ಶ್ರೀ ಹಂಸವಾಹಿನಿ ಮಕ್ಕಳ ಮಂದಿರ, ಕನಕಪುರ, ರಾಮನಗರ ಜಿಲ್ಲೆ.
7. ಮಂಗಳ ವಿದ್ಯಾ ಮಂದಿರ, ಯಲಹಂಕ ನ್ಯೂಟೌನ್, ಬೆಂ. ನಗರ ಜಿಲ್ಲೆ.
8. ಶ್ರೀ ಭಾರತಿ ವಿದ್ಯಾನಿಕೇತನ, ಅತ್ತಿಬೆಲೆ, ಆನೇಕಲ್ ತಾ, ಬೆಂ. ನಗರ ಜಿಲ್ಲೆ.

### ಪ್ರೌಢ ಶಾಲೆಗಳು

1. ಶ್ರೀ ಸರಸ್ವತಿ ವಿದ್ಯಾಮಂದಿರ, ಮಾಗಡಿ, ರಾಮನಗರ ಜಿಲ್ಲೆ.
2. ಶ್ರೀ ಶಾರದಾ ವಿದ್ಯಾಮಂದಿರ, ವರ್ತೂರು, ಬೆಂ. ನಗರ ಜಿಲ್ಲೆ.
3. ಮಂಗಳ ವಿದ್ಯಾ ಮಂದಿರ, ಯಲಹಂಕ, ಬೆಂ. ನಗರ ಜಿಲ್ಲೆ.

## ಶ್ರೀ ಮಂಗಳ ಶಿಕ್ಷಣ ಸಮಿತಿ ಸಹಯೋಗದಲ್ಲಿ ನಡೆಯುತ್ತಿರುವ ಶಾಲೆಗಳು

### ಪೂರ್ವ ಪ್ರಾಥಮಿಕ ಮತ್ತು ಹಿರಿಯ ಪ್ರಾಥಮಿಕ ಶಾಲೆಗಳು

1. ಶ್ರೀ ಜ್ಞಾನವಾಹಿನಿ ವಿದ್ಯಾಕೇಂದ್ರ, ನೆಲಮಂಗಲ ಬೆಂ. ಗ್ರಾ. ಜಿಲ್ಲೆ.
2. ಸ್ವಾಮಿ ವಿವೇಕಾನಂದ ವಿದ್ಯಾಕೇಂದ್ರ, ಹೊಸಕೋಟೆ, ಬೆಂ. ಗ್ರಾ. ಜಿಲ್ಲೆ.
3. ಸ್ವಾಮಿ ವಿವೇಕಾನಂದ ಹೆಂಕ್ ಬ್ರೂನ ರೌಂಡ್‌ಟೇಬಲ್ ಸ್ಕೂಲ್, ದೊಡ್ಡಗಟ್ಟಿಗನಬ್ಬೆ, ಹೊಸಕೋಟೆ ತಾ, ಬೆಂ. ಗ್ರಾ. ಜಿಲ್ಲೆ.
4. ಶ್ರೀ ಗುರೂಜಿ ವಿದ್ಯಾಮಂದಿರ, ಆನೇಕಲ್, ಬೆಂ. ನಗರ ಜಿಲ್ಲೆ.
5. ಸೆಂಟ್‌ಪಾಲ್ ಕಾನ್ವೆಂಟ್, ಕೆ.ಪಿ. ಅಗ್ರಹಾರ, ಬೆಂಗಳೂರು.
6. ಶ್ರೀ ವಿವೇಕಾನಂದ ವಿದ್ಯಾನಿಕೇತನ, ನೆರಳೂರು, ಬೆಂ. ನಗರ ಜಿಲ್ಲೆ.

### ಪ್ರೌಢ ಶಾಲೆಗಳು

1. ಜ್ಞಾನವಾಹಿನಿ ವಿದ್ಯಾಕೇಂದ್ರ, ನೆಲಮಂಗಲ, ಬೆಂ. ಗ್ರಾ. ಜಿಲ್ಲೆ.
2. ಸ್ವಾಮಿ ವಿವೇಕಾನಂದ ವಿದ್ಯಾಕೇಂದ್ರ, ಹೊಸಕೋಟೆ, ಬೆಂ. ಗ್ರಾ. ಜಿಲ್ಲೆ.
3. ಸ್ವಾಮಿ ವಿವೇಕಾನಂದ ರೌಂಡ್‌ಟೇಬಲ್ ಸ್ಕೂಲ್, ದೊಡ್ಡಗಟ್ಟಿಗನಬ್ಬೆ, ಹೊಸಕೋಟೆ ತಾಲ್ಲೂಕು, ಬೆಂ. ಗ್ರಾ. ಜಿಲ್ಲೆ.
4. ಶ್ರೀ ಗುರೂಜಿ ವಿದ್ಯಾಮಂದಿರ, ಆನೇಕಲ್, ಬೆಂ. ನಗರ ಜಿಲ್ಲೆ.
5. ಶ್ರೀ ವಿವೇಕಾನಂದ ವಿದ್ಯಾನಿಕೇತನ, ನೆರಳೂರು, ಬೆಂ. ನಗರ ಜಿಲ್ಲೆ.
6. ಎಂ.ಇ.ಎಸ್. ಪ್ರೌಢಶಾಲೆ, ಮರಳವಾಡಿ, ಕನಕಪುರ ಬೆಂ. ಗ್ರಾ. ಜಿಲ್ಲೆ.
7. ಮಾರುತಿ ಪ್ರೌಢಶಾಲೆ, ರಾಜಘಟ್ಟ, ಬೆಂ. ಗ್ರಾ. ಜಿಲ್ಲೆ.

## ಬಾಲಕರ ವ್ಯಕ್ತಿತ್ವ ವಿಕಸನ ಶಿಬಿರ

ದಿನಾಂಕ 12, 13 ಮತ್ತು 14ನೇ ಏಪ್ರಿಲ್ 2019 ರಂದು ಶ್ರೀ ಹಂಸವಾಹಿನಿ ಮಕ್ಕಳ ಮಂದಿರ, ಕನಕಪುರ ಶಾಲೆಯಲ್ಲಿ 3 ದಿನಗಳ ಬಾಲಕರ ವ್ಯಕ್ತಿತ್ವ ವಿಕಸನ ಶಿಬಿರವನ್ನು ನಡೆಸಲಾಯಿತು. ಈ ಶಿಬಿರದಲ್ಲಿ 83 ಮಕ್ಕಳು ಭಾಗವಹಿಸಿದ್ದರು.



ಶ್ರೀ ಗೌರೀಶ್‌ರವರು ಮಕ್ಕಳಿಗೆ ಮಾರ್ಗದರ್ಶನ ನೀಡುತ್ತಿರುವುದು

## ಎಸ್.ಎಸ್.ಎಲ್.ಸಿ. ಉತ್ತೀರ್ಣರಾದ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ

ದಿನಾಂಕ 01-05-2019 ರಂದು ಶ್ರೀ ಮಂಗಳ ಶಿಕ್ಷಣ ಸಮಿತಿಯ ವತಿಯಿಂದ 10ನೇ ತರಗತಿ ಉತ್ತೀರ್ಣರಾದ ವಿದ್ಯಾರ್ಥಿಗಳಿಗೆ ಮುಂದಿನ ವಿದ್ಯಾಭ್ಯಾಸದ ಬಗ್ಗೆ ಮಾರ್ಗದರ್ಶನ ನೀಡಲಾಯಿತು.



ಪೋಷಕರೊಂದಿಗೆ ಮಕ್ಕಳು ಮಾರ್ಗದರ್ಶನ ಪಡೆಯುತ್ತಿರುವುದು





## ಶಿಕ್ಷಕರ ಚೈತನ್ಯ ತರಬೇತಿ ಕಾರ್ಯಗಾರ

ದಿನಾಂಕ 24 ಮತ್ತು 25ನೇ ಮೇ 2019 ರಂದು 2 ದಿನಗಳ ಶಿಕ್ಷಕರ ಚೈತನ್ಯ ಶಿಬಿರವನ್ನು ಮಂಗಳ ವಿದ್ಯಾ ಮಂದಿರ, ಯಲಹಂಕ ಶಾಲೆಯಲ್ಲಿ ನಡೆಸಲಾಯಿತು.



ಶ್ರೀ ಪ್ರಭಾಕರ್‌ರವರು ಶಿಕ್ಷಕರಿಗೆ ಮಾರ್ಗದರ್ಶನ ನೀಡುತ್ತಿರುವುದು

## ಉಚಿತ ಮಾರ್ಗದರ್ಶನ ಕಾರ್ಯಗಾರ

ಸಿ.ಇ.ಟಿ. ಕೌನ್ಸಿಲಿಂಗ್ ಎದುರಿಸುತ್ತಿರುವ ಪಿ.ಯು.ಸಿ. ವಿದ್ಯಾರ್ಥಿಗಳಿಗೆ ದಿನಾಂಕ 31-05-2019 ರಂದು ಸಂಜೆ 6.00 ಗಂಟೆಗೆ ಶ್ರೀ ಮಂಗಳ ಶಿಕ್ಷಣ ಸಮಿತಿಯು ಉಚಿತ ಮಾರ್ಗದರ್ಶನ ಕಾರ್ಯಗಾರವನ್ನು ಶ್ರೀ ಹೊಂಬೇಗೌಡ ಪಿ.ಯು. ಕಾಲೇಜು, ಗಾಯಿತ್ರಿ ನಗರ, ಬೆಂಗಳೂರು. ಇಲ್ಲಿ ಏರ್ಪಡಿಸಲಾಯಿತು. ಈ ಕಾರ್ಯಕ್ರಮದಲ್ಲಿ 30 ವಿದ್ಯಾರ್ಥಿಗಳು ಮತ್ತು ಪೋಷಕರು ಭಾಗವಹಿಸಿದ್ದರು.



ಪೋಷಕರು ಮತ್ತು ವಿದ್ಯಾರ್ಥಿಗಳು ಉಚಿತ ಮಾರ್ಗದರ್ಶನ ಪಡೆಯುತ್ತಿರುವುದು

## ಮಂಗಳ ವಿದ್ಯಾ ಕೇಂದ್ರ ಉದ್ಘಾಟನಾ ಸಮಾರಂಭ

ದಿನಾಂಕ 07–06–2019 ರ ಶುಕ್ರವಾರ ನೂತನವಾಗಿ ಮಾಗಡಿಯಲ್ಲಿ ಮಂಗಳ ವಿದ್ಯಾ ಕೇಂದ್ರವನ್ನು ಉದ್ಘಾಟಿಸಿ ಪೂರ್ವ ಪ್ರಾಥಮಿಕ ಶಿಕ್ಷಣವನ್ನು ಆಂಗ್ಲ ಮಾಧ್ಯಮದಲ್ಲಿ ಪ್ರಾರಂಭಿಸಲಾಯಿತು. ಮುಖ್ಯ ಅತಿಥಿಗಳಾಗಿ ಆಗಮಿಸಿ ಡಾ. ಸಿದ್ದರಾಮಯ್ಯ ಪೂಜಾರ್‌ರವರು ಪ್ರಾಸ್ತಾವಿಕ ಭಾಷಣ ಮಾಡಿದರು.



ಶ್ರೀ ದೇವರಾಜ್‌ರವರಿಂದ ಸ್ವಾಗತ ಪರಿಚಯ

## ಉಚಿತ ನೇತ್ರ ತಪಾಸಣಾ ಶಿಬಿರ

ದಿನಾಂಕ 21–06–2019 ರ ಶುಕ್ರವಾರದಂದು ಮಂಗಳ ವಿದ್ಯಾ ಕೇಂದ್ರ ಆಂಗ್ಲ ಮಾಧ್ಯಮ ಶಾಲೆ, ಅಕ್ಷಯ ಟ್ರಸ್ಟ್ (ರಿ) ಮಾಗಡಿಯಲ್ಲಿ, ವಿಜಯ ನೇತ್ರಾಲಯ ವತಿಯಿಂದ ಉಚಿತ ನೇತ್ರ ತಪಾಸಣೆ ಮತ್ತು ಶಸ್ತ್ರ ಚಿಕಿತ್ಸಾ ಶಿಬಿರವನ್ನು ಏರ್ಪಡಿಸಲಾಯಿತು.





ಅಕ್ಷಯ ಟ್ರಸ್ಟ್ (ರಿ.) ವಿಜಯ ನೇತ್ರಾಲಯ
ಮಾಳಗಾಳ ಅಂಡರ್ ಪಾಸ್ ರಿಂಗ್ ರಸ್ತೆ, ನಾಗರಭಾವಿ 2ನೇ ಹಂತ, ಬೆಂಗಳೂರು - 560 091. ದೂರವಾಣಿ : 080-23183834
ಶಿಬಿರದ ಆಯೋಜಕರು
ಶ್ರೀ ಮಂಗಳ ಶಿಕ್ಷಣ ಸಮಿತಿ (ರಿ.)
ಮಂಗಳ ವಿದ್ಯಾ ಕೇಂದ್ರ ಆಂಗ್ಲ ಮಾಧ್ಯಮ ಶಾಲೆ
ಇವರುಗಳ ಸಂಯುಕ್ತ ಆಶ್ರಯದಲ್ಲಿ
ಉಚಿತ ನೇತ್ರ ತಪಾಸಣೆ ಹಾಗೂ ಶಸ್ತ್ರ ಚಿಕಿತ್ಸಾ ಶಿಬಿರವನ್ನು ಏರ್ಪಡಿಸಲಾಗಿದೆ.
ದಿನಾಂಕ: 21-06-2019ನೇ ಶುಕ್ರವಾರ
ಸಮಯ: ಬೆಳಿಗ್ಗೆ 10.00 ರಿಂದ ಮಧ್ಯಾಹ್ನ 12.00 ರವರೆಗೆ
ಸ್ಥಳ: ಮಂಗಳ ವಿದ್ಯಾ ಕೇಂದ್ರ ಆಂಗ್ಲ ಮಾಧ್ಯಮ ಶಾಲೆ
ಬಿ.ಜಿ.ಎಸ್. ಕಾಲೇಜು ರಸ್ತೆ, ಶ್ರೀ ರಾಘವೇಂದ್ರಸ್ವಾಮಿ ಮಠದ ಹಿಂಭಾಗ, ಮಾಗಡಿ ಟೌನ್.

ನೇತ್ರ ತಪಾಸಣಾ ಶಿಬಿರದಲ್ಲಿ ವೈದ್ಯಾಧಿಕಾರಿಯನ್ನು ಸನ್ಮಾನಿಸುತ್ತಿರುವುದು





## ಅಂತರಾಷ್ಟ್ರೀಯ ಯೋಗ ದಿನಾಚರಣೆ

ದಿನಾಂಕ 21–06–2019 ರಂದು ಶ್ರೀ ಸರಸ್ವತಿ ವಿದ್ಯಾಮಂದಿರ, ಮಂಗಳ ವಿದ್ಯಾ ಕೇಂದ್ರ ಆಂಗ್ಲ ಮಾಧ್ಯಮ ಶಾಲೆ, ಮಾಗಡಿ ಇವರ ಸಂಯುಕ್ತ ಆಶ್ರಯದಲ್ಲಿ ಅಂತರಾಷ್ಟ್ರೀಯ ಯೋಗ ದಿನಾಚರಣೆಯನ್ನು ಸಾರ್ವಜನಿಕ ಶಿಕ್ಷಣ ಇಲಾಖೆ, ಮಾಗಡಿ ಮತ್ತು ಅಗಸ್ತ್ಯ ಚಾರಿಟಬಲ್ ಟ್ರಸ್ಟ್ ಮಾಗಡಿ ಇವರ ಸಹಯೋಗದೊಂದಿಗೆ ನಡೆಸಲಾಯಿತು.




## ಗಾನ ಕಲಾ ವೈಭವ

ದಿನಾಂಕ 29–06–2019 ರಂದು ಮಂಗಳ ಮ್ಯೂಸಿಕ್ ಅಕಾಡೆಮಿ, ನಾದೋಪಸಾನ ಟ್ರಸ್ಟ್, ಬೆಂಗಳೂರು ರವರ ಸಹಯೋಗದೊಂದಿಗೆ ಗಾನ ಕಲಾ ವೈಭವ ಎಂಬ ಕಾರ್ಯಕ್ರಮವನ್ನು ಮಂಗಳ ವಿದ್ಯಾ ಮಂದಿರ, ಯಲಹಂಕ ಶಾಲೆಯಲ್ಲಿ ಶ್ರೀ ಮಂಗಳ ಶಿಕ್ಷಣ ಸಮಿತಿಯು ಹಮ್ಮಿಕೊಂಡಿತ್ತು. ಈ ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಗಳಾಗಿ ಶ್ರೀಮತಿ ಶುಭಲಕ್ಷ್ಮಿ ಕೃಷ್ಣಮೂರ್ತಿಯವರು ಉಪನಿರ್ದೇಶಕರು ರಾಡಾರ್ ಅಭಿವೃದ್ಧಿ ವಿಭಾಗ, ಇಸ್ರೋ, ಬೆಂಗಳೂರು. ರವರು ಭಾಗವಹಿಸಿದ್ದರು.



ಶ್ರೀಮತಿ ಶುಭಲಕ್ಷ್ಮಿ ರವರಿಗೆ ಶ್ರೀ ಹೊ. ಬೈರಪ್ಪರವರಿಂದ ಸನ್ಮಾನ

## ಜೀವನ ಮೌಲ್ಯಗಳ ಬಗ್ಗೆ ಮಾರ್ಗದರ್ಶನ

ದಿನಾಂಕ 04-07-2019 ರಂದು ಶ್ರೀ ಶಾರದಾ ವಿದ್ಯಾ ಮಂದಿರ ವರ್ತೂರು ಶಾಲೆಯಲ್ಲಿ ಶ್ರೀ ಗೋವಿಂದಜೀ ರವರು ಕ್ಷೇತ್ರೀಯ ಸಹಬೋದಿಕ್ ಪ್ರಮುಖರು, ರಾಷ್ಟ್ರೀಯ ಸ್ವಯಂ ಸೇವಕ ಸಂಘ ಇವರು 10ನೇ ತರಗತಿ ವಿದ್ಯಾರ್ಥಿಗಳಿಗೆ ವಿದ್ಯಾಭ್ಯಾಸ ಜೀವನಕ್ಕೆ ಯಾವ ರೀತಿ ಪೂರಕವಾಗಿದೆ ಮತ್ತು ಜೀವನ ಮೌಲ್ಯಗಳ ಬಗ್ಗೆ ಮಾರ್ಗದರ್ಶನ ಮಾಡಿದರು.



ಶ್ರೀ ಗೋವಿಂದಜೀ ರವರಿಂದ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ

## ಗುರು ಪೂರ್ಣಿಮ

ದಿನಾಂಕ 16-07-2019 ರಂದು ಗುರು ಪೂರ್ಣಿಮ ಪೂಜಾ ಕಾರ್ಯಕ್ರಮವನ್ನು ಶ್ರೀ ಮಂಗಳ ಶಿಕ್ಷಣ ಸಮಿತಿಯ ಎಲ್ಲಾ ಶಾಲೆಗಳಲ್ಲಿ ಆಚರಣೆ ಮಾಡಿ, ಗುರುವಿನ ಮಹತ್ವದ ಬಗ್ಗೆ ಮಕ್ಕಳಿಗೆ ತಿಳಿಸಲಾಯಿತು.





## ಜಿಲ್ಲಾ ಮಟ್ಟದ ಕ್ರೀಡಾಕೂಟ

ದಿನಾಂಕ 19-07-2019 ರ ಸಂಜೆ 5.00 ಗಂಟೆಗೆ ಶ್ರೀ ಸರಸ್ವತಿ ವಿದ್ಯಾ ಮಂದಿರ, ಮಾಗಡಿ ಶಾಲೆಯ ಮೈದಾನದಲ್ಲಿ ಶ್ರೀ ಆಕಾಶ್ ರೋಹಿತ್‌ರವರು ಅಂತರಾಷ್ಟ್ರೀಯ ಈಜುಪಟು ಬೆಂಗಳೂರು, ಇವರು ಉದ್ಘಾಟಿಸಿ, ಒಲಂಪಿಕ್‌ನಲ್ಲಿ ಚಿನ್ನದ ಪದಕ ಕ್ರೀಡಾಪಟುಗಳ ಗುರಿಯಾಗಲಿ ಎಂದು ತಮ್ಮ ಅಭಿಮತ ವ್ಯಕ್ತಪಡಿಸಿದರು. ಹಾಗೂ ಶ್ರೀ ರಘು ಬಿ.ಆರ್.ಕೆ.ಎಸ್. ಉದ್ಯಮಿಗಳು ಮಾಗಡಿ, ಇವರು ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು.

10 ಪ್ರಾಥಮಿಕ ಹಾಗೂ ಪ್ರೌಢಶಾಲೆಗಳಿಂದ 310 ವಿದ್ಯಾರ್ಥಿಗಳು ಹಾಗೂ 40 ಶಿಕ್ಷಕರು ಭಾಗವಹಿಸಿದ್ದರು.




ವಿಜೇತ ವಿದ್ಯಾರ್ಥಿಗಳನ್ನು ಸನ್ಮಾನಿಸಿದ ಶ್ರೀ ಆಕಾಶ್ ರೋಹಿತ್



ಉದ್ದ ಜಿಗಿತ ಸ್ಪರ್ಧೆಯಲ್ಲಿ ಜಿಗಿಯುತ್ತಿರುವ ಕ್ರೀಡಾಪಟು

## ಪ್ರತಿಭಾ ಪುರಸ್ಕಾರ ಸಮಾರಂಭ

ದಿನಾಂಕ 28–07–2019 ಭಾನುವಾರದಂದು ಶ್ರೀ ಮಂಗಳ ಶಿಕ್ಷಣ ಸಮಿತಿಯ ವತಿಯಿಂದ ಪ್ರತಿಭಾ ಪುರಸ್ಕಾರ ಸಮಾರಂಭ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಡಾ. ವಿಜಯಲಕ್ಷ್ಮಿ ಬಾಳೆಕುಂದ್ರಿ ರವರು ಖ್ಯಾತ ಮಕ್ಕಳ ಹಾಗೂ ಹೃದ್ರೋಗ ತಜ್ಞರು, ವೈದ್ಯಕೀಯ ಮತ್ತು ಸಂಶೋಧನಾ ಸಂಸ್ಥೆ, ಬೆಂಗಳೂರು. ಇವರು ವಹಿಸಿದ್ದರು.

ಸಮಾರಂಭದಲ್ಲಿ ಶ್ರೀ ಮಂಗಳ ಶಿಕ್ಷಣ ಸಮಿತಿಯ ಆಶ್ರಯದಲ್ಲಿ ಬರುವ 4 ಜಿಲ್ಲೆಗಳ 12 ಶಾಲೆಗಳಲ್ಲಿ 10ನೇ ತರಗತಿಯಲ್ಲಿ ಅತಿ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗಳನ್ನು ಶ್ರೀ ಆರ್. ಶಿವಕುಮಾರ್‌ರವರು ಸಿ.ಎಂ.ಡಿ. ಕುಮಾರ್ ಗ್ರಾನೈಟ್ ಮತ್ತು ಮಾರ್ಬಲ್ಸ್ ಬೆಂಗಳೂರು. ಪ್ರತಿಭಾನ್ವಿತರಿಗೆ ಪ್ರತಿಭಾ ಪುರಸ್ಕಾರ ನೀಡಿದರು.




ಗಣ್ಯರೊಂದಿಗೆ ಪ್ರತಿಭಾನ್ವಿತ ವಿದ್ಯಾರ್ಥಿಗಳು

## ಎಸ್.ಎಸ್.ಎಲ್.ಸಿ. ಮತ್ತು ಪಿ.ಯು.ಸಿ. ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ

ಶ್ರೀ ಮಂಗಳ ಶಿಕ್ಷಣ ಸಮಿತಿಯ ಶಾಲೆಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಶಿಕ್ಷಕರ ಮಕ್ಕಳು ಎಸ್.ಎಸ್.ಎಲ್.ಸಿ. ಮತ್ತು ಪಿ.ಯು.ಸಿ.ಯಲ್ಲಿ ಅತಿ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನವನ್ನು ನೀಡಿ ಗೌರವಿಸಲಾಯಿತು.










## ನಿವೃತ್ತ ಶಿಕ್ಷಕರಿಗೆ ಮತ್ತು ಬೋಧಕೇತರ ವರ್ಗದವರಿಗೆ ಸನ್ಮಾನ

ನಿವೃತ್ತಿ ಹೊಂದಿದ ಶ್ರೀ ಟಿ.ಎಂ. ರಾಜಣ್ಣ ಶ್ರೀ ಮಂಗಳ ವಿದ್ಯಾ ಮಂದಿರ, ದೊಡ್ಡಬಳ್ಳಾಪುರ ಶಾಲೆಯ ಶಿಕ್ಷಕರು ಮತ್ತು ಬೋಧಕೇತರ ವರ್ಗದವರಾದ ಶ್ರೀಮತಿ ಹುಚ್ಚಮ್ಮ ಶ್ರೀ ಹಂಸವಾಹಿನಿ ಮಕ್ಕಳ ಮಂದಿರ, ಕನಕಪುರ ಶಾಲೆ ಇವರನ್ನು ಶ್ರೀ ಸಂಜಯ್ ಶರಫ್‌ರವರು ಸನ್ಮಾನಿಸಿದರು.




ಬೋಧಕೇತರ ವರ್ಗದವರಾದ ಶ್ರೀಮತಿ ಹುಚ್ಚಮ್ಮರವರಿಗೆ ಗಣ್ಯರಿಂದ ಸನ್ಮಾನ




ವಾರ್ಷಿಕ ವರದಿ ಪುಸ್ತಕ ಬಿಡುಗಡೆ ಸಮಾರಂಭ





## ಉತ್ತರ ಕರ್ನಾಟಕ ನೆರೆ ಸಂತ್ರಸ್ತರ ಪರಿಹಾರ ನಿಧಿ ಸಂಗ್ರಹಣೆ

ದಿನಾಂಕ 13–08–2019 ರಂದು ಉತ್ತರ ಕರ್ನಾಟಕದ ನೆರೆ ಸಂತ್ರಸ್ತರಿಗೆ ಪರಿಹಾರ ನಿಧಿಯನ್ನು ಶ್ರೀ ಮಂಗಳ ಶಿಕ್ಷಣ ಸಮಿತಿಯು ನಡೆಸುತ್ತಿರುವ 8 ಶಾಲೆಗಳ ಮಕ್ಕಳಿಂದ ರೂ. 18,144/– ಗಳನ್ನು ಸಂಗ್ರಹಿಸಿ ನೆರೆ ಸಂತ್ರಸ್ತರಿಗೆ ನೀಡಲಾಯಿತು.

## ಅಖಂಡ ಭಾರತ ಸಂಕಲ್ಪ ದಿನ

ಶ್ರೀ ಸರಸ್ವತಿ ವಿದ್ಯಾಮಂದಿರ, ಮಂಗಳ ವಿದ್ಯಾ ಕೇಂದ್ರ ಮಾಗಡಿ ಶಾಲೆಗಳಲ್ಲಿ 73ನೇ ಸ್ವಾತಂತ್ರೋತ್ಸವದ ಪ್ರಯುಕ್ತ ದಿನಾಂಕ 14–08–2019 ಬುಧವಾರ ಪಂಜಿನ ಮೆರವಣಿಗೆಯ ಮೂಲಕ ಪಥ ಸಂಚಲನ ಮಾಡಿ ಮಧ್ಯರಾತ್ರಿಯಲ್ಲಿ ಧ್ವಜಾರೋಹಣ ಮಾಡುವುದರ ಮೂಲಕ ಅಖಂಡ ಭಾರತ ಸಂಕಲ್ಪ ದಿನವನ್ನು ಆಚರಿಸಲಾಯಿತು. ಈ ಕಾರ್ಯಕ್ರಮಕ್ಕೆ ಶ್ರೀ ಎ. ಮಂಜುನಾಥ್‌ರವರು ಅಧ್ಯಕ್ಷತೆಯನ್ನು ವಹಿಸಿದ್ದರು. ಶ್ರೀ ಪ್ರಮೋದ್ ನ.ಗೋ. ಬೆಂಗಳೂರು ಉತ್ತರ ವಿಭಾಗ ಪ್ರಚಾರ ಪ್ರಮುಖ್ ಇವರು ಪ್ರಾಸ್ತಾವಿಕ ಭಾಷಣ ಮಾಡಿದರು.



ಪಂಜಿನ ಪಥ ಸಂಚಲನ

## ಗ್ರಾಮೀಣ ಮಹಿಳೆಯರಿಗೆ ಮತ್ತು ಶಾಲಾ ಮಕ್ಕಳಿಗೆ ಕಂಪ್ಯೂಟರ್ ತಂತ್ರಜ್ಞಾನ ತರಬೇತಿ ಕಾರ್ಯಕ್ರಮ

ದಿನಾಂಕ 14–09–2019 ಶನಿವಾರದಂದು The Institution of Electronics and Telecommunication Engineers, Bangalore Centre ಮತ್ತು ಶ್ರೀ ಮಂಗಳ ಶಿಕ್ಷಣ ಸಮಿತಿ ಇವರ ಸಂಯುಕ್ತ ಆಶ್ರಯದಲ್ಲಿ ಮಹಿಳೆಯರಿಗೆ ಮತ್ತು ಶಾಲಾ ಮಕ್ಕಳಿಗೆ ಕಂಪ್ಯೂಟರ್ ತಂತ್ರಜ್ಞಾನ ತರಬೇತಿ ಕಾರ್ಯಕ್ರಮವನ್ನು ಶ್ರೀ ವೀಣಾ ಮಕ್ಕಳ ಮಂದಿರ ತ್ಯಾಮಗೊಂಡ್ಲು ಶಾಲೆಯಲ್ಲಿ ನಡೆಸಲಾಯಿತು.



**ಕಂಪ್ಯೂಟರ್ ತರಬೇತಿ ಪಡೆಯುತ್ತಿರುವ ವಿದ್ಯಾರ್ಥಿನಿಯರು**

## ವೇದ ಸುರಭಿ ತರಬೇತಿ ಕಾರ್ಯಾಗಾರ

ಮಕ್ಕಳಲ್ಲಿ ಏಕಾಗ್ರ ಚಿತ್ತತೆ ಬೆಳೆಸುವ ಹಾಗೂ ಸ್ಮರಣ ಶಕ್ತಿಯನ್ನು ಹೆಚ್ಚಿಸುವ ಸಲುವಾಗಿ ಆಗಸ್ಟ್ ತಿಂಗಳಲ್ಲಿ ವೇದ ಸುರಭಿಯನ್ನು ಅನುಷ್ಠಾನಗೊಳಿಸಿ ಮಂತ್ರಗಳ ಪಠಣೆ ಮಾಡುವುದರ ಬಗ್ಗೆ ದಿನಾಂಕ 14–09–2019 ಶನಿವಾರದಂದು ಮಂಗಳ ವಿದ್ಯಾ ಮಂದಿರ, ಯಲಹಂಕ ಶಾಲೆಯಲ್ಲಿ 6 ಶಾಲೆಗಳಿಂದ 8 ಶಿಕ್ಷಕರಿಗೆ ತರಬೇತಿಯನ್ನು ನೀಡಲಾಯಿತು. ಈ ಕಾರ್ಯಾಗಾರದಡಿಯಲ್ಲಿ ಒಟ್ಟು 6 ಶಾಲೆಗಳಿಂದ 205 ವಿದ್ಯಾರ್ಥಿಗಳು ವೇದ ಸಂಸ್ಕೃತ ಪಠಣೆಯ ಸದುಪಯೋಗವನ್ನು ಪಡೆದುಕೊಂಡರು.





## ಅನುದಾನಿತ ಶಿಕ್ಷಕರ ವಾರ್ಷಿಕ ವೇತನ ಬಡ್ತಿ ಸಂದರ್ಶನ ಸಭೆ

ದಿನಾಂಕ 27–10–2019 ರಂದು ಅನುದಾನಿತ ಶಿಕ್ಷಕರ ವಾರ್ಷಿಕ ವೇತನ ಬಡ್ತಿಯ ಸಂದರ್ಶನ ಸಭೆ ಮತ್ತು ಶ್ರೀ ಮಂಗಳ ಶಿಕ್ಷಣ ಸಮಿತಿಯ ಕೇಂದ್ರ ಕಛೇರಿಯ ಪೂಜಾ ಕಾರ್ಯಕ್ರಮವನ್ನು ಯಲಹಂಕದಲ್ಲಿ ಹೊ. ಭೈರಪ್ಪರವರ ಅಧ್ಯಕ್ಷತೆಯಲ್ಲಿ ನಡೆಸಲಾಯಿತು. ಈ ಕಾರ್ಯಕ್ರಮಕ್ಕೆ ಶ್ರೀ ಮಂಗಳ ಶಿಕ್ಷಣ ಸಮಿತಿಯ ಸದಸ್ಯರು, ಕಾರ್ಯದರ್ಶಿಗಳು ಭಾಗವಹಿಸಿದ್ದರು.

## ವಿಮಾನ ಹಾರಾಟದ ಪರಿಚಯ

ರೋಟರಿ ಕ್ಲಬ್ ಸದಾಶಿವ ನಗರ ಇವರು ಆಯೋಜಿಸಿದ್ದ ಪೈಲೆಟ್ ಗ್ಲೇಡರ್ (ವಿಮಾನ ಹಾರಾಡಿಸುವ) ಯೋಜನೆಯಲ್ಲಿ ಮಂಗಳ ವಿದ್ಯಾ ಮಂದಿರ ಯಲಹಂಕ ಶಾಲೆಯ 2019–20ನೇ ಸಾಲಿನ 10ನೇ ತರಗತಿಯ ವಿದ್ಯಾರ್ಥಿನಿಯಾದ ಹೇಮ. ವೈ.ಜಿ. ರವರು ಆಯ್ಕೆಯಾಗಿರುತ್ತಾರೆ. ಇವರಿಗೆ ಮಂಗಳ ಶಿಕ್ಷಣ ಸಮಿತಿಯ ವತಿಯಿಂದ ಅಭಿನಂದನೆಗಳು.




**ಗ್ಲೇಡರ್‌ನೊಂದಿಗೆ ವಿದ್ಯಾರ್ಥಿನಿ ಮತ್ತು ಪೋಷಕರು**

## ಆಡಿಯೋ ರೆಕಾರ್ಡಿಂಗ್

ದಿನಾಂಕ 05–11–2019 ರಂದು ಶ್ರೀ ಮಂಗಳ ಶಿಕ್ಷಣ ಸಮಿತಿಯಲ್ಲಿ ಪ್ರಾರ್ಥನೆಯಾಗಿ ಮಾಡುತ್ತಿರುವ ಸರಸ್ವತಿ ವಂದನೆಯನ್ನು ಮಂಗಳ ವಿದ್ಯಾ ಮಂದಿರ, ಯಲಹಂಕ ಶಾಲೆಯ ವಿದ್ಯಾರ್ಥಿನಿಯರಿಂದ ಧ್ವನಿ ಮುದ್ರಣವನ್ನು ಶುದ್ಧಪಡಿಸಲಾಯಿತು.



ಮಂಗಳ ವಿದ್ಯಾ ಮಂದಿರ ಯಲಹಂಕ ಶಾಲೆಯ ವಿದ್ಯಾರ್ಥಿನಿಯರಿಂದ ಧ್ವನಿ ಮುದ್ರಣ



ಧ್ವನಿ ಮುದ್ರಣ ತಾಂತ್ರಿಕ ತಂಡದೊಂದಿಗೆ





## ರಾಜ್ಯ ಮಟ್ಟದ ಚಿತ್ರಕಲಾ ಮತ್ತು ದೇಶಭಕ್ತಿ ಗೀತಗಾಯನ ಸ್ಪರ್ಧೆ

ದಿನಾಂಕ 14 ಮತ್ತು 15 ನೇ ನವೆಂಬರ್ 2019 ರಂದು ರಾಜ್ಯ ಮಟ್ಟದ ಚಿತ್ರಕಲಾ ಮತ್ತು ದೇಶಭಕ್ತಿ ಗೀತಗಾಯನ ಸ್ಪರ್ಧೆಯನ್ನು ಮಂಗಳ ವಿದ್ಯಾಮಂದಿರ, ಯಲಹಂಕ ಶಾಲೆಯಲ್ಲಿ ಶ್ರೀ ಮಂಗಳ ಶಿಕ್ಷಣ ಸಮಿತಿ ವತಿಯಿಂದ ಹಮ್ಮಿಕೊಳ್ಳಲಾಯಿತು. ಕಾರ್ಯಕ್ರಮಕ್ಕೆ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರಾದ ಮಾನ್ಯ ಎಸ್. ಸುರೇಶ್‌ಕುಮಾರ್‌ರವರು ಉದ್ಘಾಟಿಸಿದರು. ನಂತರ ಶಾಲಾ ಕಾಲೇಜುಗಳಲ್ಲಿ ದೇಶಭಕ್ತಿ ಸಾರುವ ಕಾರ್ಯಕ್ರಮಗಳನ್ನು ಆಯೋಜಿಸುವುದರಿಂದ ಮಕ್ಕಳಿಗೆ ದೇಶದ ಬಗ್ಗೆ ಅಭಿಮಾನ ಮೂಡುವ ಜೊತೆಗೆ ಉತ್ತಮ ಸಂಸ್ಕಾರ ದೊರೆಯುತ್ತದೆ ಎಂದು ತಿಳಿಸಿದರು.



ಸನ್ಮಾನ್ಯ ಸಚಿವರಾದ ಎಸ್. ಸುರೇಶ್‌ಕುಮಾರ್‌ರವರಿಗೆ ಹೊ. ಭೈರಪ್ಪರವರಿಂದ ಸನ್ಮಾನ



ರಾಜ್ಯ ಮಟ್ಟದ ಚಿತ್ರಕಲೆಯಲ್ಲಿ ಪ್ರಥಮ ಬಹುಮಾನ ಪಡೆದ ಮಂಗಳ ವಿದ್ಯಾ ಮಂದಿರ ಶಾಲೆಯ ವಿದ್ಯಾರ್ಥಿ

## ಸರ್ವ ಸದಸ್ಯರ ಸಭೆ

ಶ್ರೀ ಮಂಗಳ ಶಿಕ್ಷಣ ಸಮಿತಿಯ ಸರ್ವ ಸದಸ್ಯರ ಸಭೆಯು ದಿನಾಂಕ 24–11–2019 ರ ಭಾನುವಾರದಂದು ಬೆಳಿಗ್ಗೆ 10.00 ಗಂಟೆಗೆ ಸಮಿತಿಯ ಅಧ್ಯಕ್ಷರಾದ ಶ್ರೀ ಹೊ. ಭೈರಪ್ಪನವರ ಅಧ್ಯಕ್ಷತೆಯಲ್ಲಿ ಮಂಗಳ ವಿದ್ಯಾ ಮಂದಿರ ಯಲಹಂಕ ಶಾಲೆಯಲ್ಲಿ 2019–20ನೇ ಸಾಲಿನ ಸರ್ವ ಸದಸ್ಯರ ಸಭೆಯನ್ನು ಏರ್ಪಡಿಸಲಾಗಿತ್ತು. ಸಭೆಯಲ್ಲಿ ಎಲ್ಲಾ ಸದಸ್ಯರು ಉಪಸ್ಥಿತರಿದ್ದು ಕಾರ್ಯದರ್ಶಿಗಳು ಸಭೆಯಲ್ಲಿ ಹಿಂದಿನ ಸಭೆಯ ನಡಾವಳಿಗಳನ್ನು ಓದಿ ರೆಕಾರ್ಡ್ ಮಾಡಿ ಸಮಿತಿಯ ಪ್ರಗತಿಯ ವರದಿಯನ್ನು ಅನುಮೋದಿಸಿ 2018–19ನೇ ಸಾಲಿನ ಪರಿಶೋಧಿಸಲ್ಪಟ್ಟ ಲೆಕ್ಕಪತ್ರಗಳನ್ನು ಅನುಮೋದಿಸುವ ವಿಚಾರದ ಬಗ್ಗೆ ಚರ್ಚಿಸಲಾಯಿತು.



ಶ್ರೀ ಮಂಗಳ ಶಿಕ್ಷಣ ಸಮಿತಿಯ ಪದಾಧಿಕಾರಿಗಳು

## ಬಾಲ ಗೋಕುಲ ಮಾತೃ ಸಂಗಮ

ಬಾಲ ಗೋಕುಲದ ಆಶ್ರಯದಲ್ಲಿ ಮಾತೃ ಸಂಗಮವು ದೊಡ್ಡಬಳ್ಳಾಪುರದಲ್ಲಿ ನಡೆಯಿತು. ಈ ಸಂಗಮಕ್ಕೆ ಕೋಲಾರ ಜಿಲ್ಲೆ, ಚಿಕ್ಕಬಳ್ಳಾಪುರ ಜಿಲ್ಲೆ, ಬೆಂಗಳೂರು ಗ್ರಾಮಾಂತರ ಜಿಲ್ಲೆ, ರಾಮನಗರ ಜಿಲ್ಲೆ, ತುಮಕೂರು ಜಿಲ್ಲೆ ಹಾಗೂ ಶ್ರೀ ಮಂಗಳ ಶಿಕ್ಷಣ ಸಮಿತಿಯು ನಡೆಸುತ್ತಿರುವ ಶಾಲೆಗಳಿಂದ 30 ಮಾತಾ ಭಗಿನಿಯರು ಭಾಗವಹಿಸಿ ತರಬೇತಿಯನ್ನು ಪಡೆದುಕೊಂಡರು. ಈ ವರ್ಗದಲ್ಲಿ ಪ್ರಾಂತ ಅಧಿಕಾರಿಗಳಾಗಿ ಶ್ರೀ ಜಯಪ್ರಕಾಶ್ ರವರು ಜೊತೆಯಲ್ಲಿದ್ದು ಮಾರ್ಗದರ್ಶನ ಮಾಡಿದರು.





## ಜಿಲ್ಲಾ ಮಟ್ಟದ ಸಾಂಸ್ಕೃತಿಕ ಕಾರ್ಯಕ್ರಮ

ದಿನಾಂಕ 06–12–2019 ರಂದು ಜಿಲ್ಲಾ ಮಟ್ಟದ ಪ್ರಬಂಧ, ದೇಶಭಕ್ತಿ ಗೀತೆ, ಭಗವದ್ಗೀತೆ ಸ್ಪರ್ಧೆಯ ಸಾಂಸ್ಕೃತಿಕ ಕಾರ್ಯಕ್ರಮವನ್ನು ಶ್ರೀ ಶನೈಶ್ವರ ಸ್ವಾಮಿ ದಾಸೋಹ ಭವನ ಕನಸವಾಡಿ (ಮಧುರೆ) ಯಲ್ಲಿ ಏರ್ಪಡಿಸಲಾಯಿತು. ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಗಳಾಗಿ ಶ್ರೀ ಸುರೇಶ್ ಮತ್ತು ಶ್ರೀ ವೆಂಕಟೇಶ್ ರವರು ಆಗಮಿಸಿದ್ದರು. ಶ್ರೀ ಶಿವರಾಂ ಶೆಟ್ಟಿಯವರು ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದರು. 11 ಪ್ರಾಥಮಿಕ ಶಾಲೆ ಹಾಗೂ 6 ಪ್ರೌಢಶಾಲೆಗಳಿಂದ ಒಟ್ಟು 112 ವಿದ್ಯಾರ್ಥಿಗಳು, 30 ಶಿಕ್ಷಕರು ಹಾಗೂ 7 ಶಿಕ್ಷಕರು ತೀರ್ಪುಗಾರರಾಗಿ ಆಗಮಿಸಿದ್ದರು.



ಶ್ರೀಮತಿ ಶಾಂತಮ್ಮರವರಿಂದ ಕಾರ್ಯಕ್ರಮದ ಉದ್ಘಾಟನೆ



ಶ್ರೀ ಶಿವರಾಂ ಶೆಟ್ಟರವರಿಂದ ವಿಜೇತ ಮಕ್ಕಳಿಗೆ ಬಹುಮಾನ ವಿತರಣೆ

## ಸೇವಾದಿನ

ದಿ.ಅಜಿತ್‌ಕುಮಾರ್‌ರವರ ಸ್ಮರಣಾರ್ಥ ದಿನಾಂಕ 21-12-2019 ರಂದು ಶ್ರೀ ಮಂಗಳ ಶಿಕ್ಷಣ ಸಮಿತಿಯ ಎಲ್ಲಾ ಶಾಲೆಗಳಲ್ಲಿ ಸ್ವಚ್ಛತಾ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು.




**ತ್ಯಾಮಗೊಂಡ್ಲು ಶಾಲೆ ಹಾಗೂ ದೊಡ್ಡಬಳ್ಳಾಪುರ ಶಾಲೆಗಳಲ್ಲಿ ನಡೆದ ಸೇವಾದಿನ**



**ವರ್ತೂರು ಮತ್ತು ಯಲಹಂಕ ಶಾಲೆಗಳಲ್ಲಿ ನಡೆದ ಸೇವಾದಿನ**





## ವೀರ ಸಾವರ್ಕರ್‌ರವರ ಕಥೆ

ದಿನಾಂಕ 15-02-2020 ರಂದು ಶ್ರೀ ಸರಸ್ವತಿ ವಿದ್ಯಾ ಮಂದಿರ, ಮಾಗಡಿ ಶಾಲೆಯಲ್ಲಿ ವೀರ ಸಾವರ್ಕರ್‌ರವರ ಜೀವನ ಚರಿತ್ರೆಯನ್ನು ಶ್ರೀ ಮಂಗಳ ಶಿಕ್ಷಣ ಸಮಿತಿಯ ಅಧ್ಯಕ್ಷರಾದ ಶ್ರೀ ಹೊ. ಭೈರಪ್ಪನವರು ಕಥಾ ಅವಧಿಯನ್ನು ನಡೆಸಿಕೊಟ್ಟರು. ಈ ಕಾರ್ಯಕ್ರಮಕ್ಕೆ 171 ವಿದ್ಯಾರ್ಥಿಗಳು, 15 ಶಿಕ್ಷಕರು, 3 ಸ್ಥಾನೀಯ ಸಮಿತಿ ಸದಸ್ಯರು ಭಾಗವಹಿಸಿದ್ದರು.



**ಶ್ರೀ ಹೊ. ಭೈರಪ್ಪನವರು ವೀರ ಸಾವರ್ಕರ್ ಕಥೆಯನ್ನು ಹೇಳುತ್ತಿರುವುದು.**

## ಶಿಕ್ಷಣ ಪ್ರೇಮಿ ಪ್ರಶಸ್ತಿ ಪ್ರದಾನ

ದಿನಾಂಕ 02-03-2020 ರಂದು ಶ್ರೀ ಮಂಗಳ ವಿದ್ಯಾ ಮಂದಿರ, ದೊಡ್ಡಬಳ್ಳಾಪುರ ಶಾಲೆಯ ಮುಖ್ಯೋಪಾಧ್ಯಾಯರಾದ ಶ್ರೀ ಉಮಾಪತಿಯವರಿಗೆ ತಾಲ್ಲೂಕು ಶಿಕ್ಷಕರ ಸಂಘದ ವತಿಯಿಂದ ಕ್ಷೇತ್ರ ಶಿಕ್ಷಣಾಧಿಕಾರಿಗಳು ಶಿಕ್ಷಣ ಪ್ರೇಮಿ ಪ್ರಶಸ್ತಿ ಪ್ರದಾನ ಮಾಡಿ ಗೌರವಿಸಿದರು.



# ಸಂಸ್ಥೆಯ ಚಟುವಟಿಕೆಗಳ ಪತ್ರಿಕಾ ವರದಿ



ದೇಶಭಕ್ತಿಯಿಂದ ಮಕ್ಕಳಿಗೆ ಉತ್ತಮ ಸಂಸ್ಕಾರ ಪ್ರಾಪ್ತಿ

ದೇಶಭಕ್ತಿ ಗೀತೆ ಗಾಯನ ಸ್ಪರ್ಧೆಯನ್ನು ಸಚಿವ ಸುರೇಶ್‌ಕುಮಾರ್ ಉದ್ಘಾಟಿಸಿದರು. ಕಾ.ಶಂ. ಶ್ರೀಧರ್, ಹೊ. ಬೈರಪ್ಪ ಇತರರಿದ್ದರು.

ಕಣ್ಣಿನ ಪರೀಕ್ಷೆ ಮಾಡಿಸಿಕೊಳ್ಳುವುದು ಅತೀ ಮುಖ್ಯ: ಉಮಾಪತಿ



ಭಾನುವಾರ, 18 ಆಗಸ್ಟ್ 2019 ನಮ್ಮ ರಾಮನಗರ

ಮಾಗಡಿಯಲ್ಲಿ ಮಧ್ಯರಾತ್ರಿ ಮೊಳಗಿದ ಸ್ವಾತಂತ್ರ್ಯದ ಕಹಳೆ

ಪಂಜಿನ ಮೆರವಣಿಗೆಯಲ್ಲಿ ವಿದ್ಯಾರ್ಥಿಗಳು ಭಾಗಿ

ಮಾಗಡಿಯಲ್ಲಿ ಜಿಲ್ಲಾ ಮಟ್ಟದ ಕ್ರೀಡಾಕೂಟಕ್ಕೆ ಚಾಲನೆ | ಅಂತಾರಾಷ್ಟ್ರೀಯ ಈಜುಪಟು ಆಕಾಶ್ ರೋಹಿತ್ ಅಭಿಮತ

ಒಲಂಪಿಕ್‌ನಲ್ಲಿ ಚಿನ್ನದ ಪದಕ ಕ್ರೀಡಾಪಟುಗಳ ಗುರಿಯಾಗಲಿ



# ಶ್ರೀ ಮಂಗಳ ಶಿಕ್ಷಣ ಸಮಿತಿ (ರಿ)

## ಎಸ್.ಎಸ್.ಎಲ್.ಸಿ. ಪ್ರತಿಭಾನ್ವಿತ ವಿದ್ಯಾರ್ಥಿಗಳು


ಪವಿತ್ರ


ಕಾವ್ಯ. ಎನ್.


ಲಕ್ಷ್ಮಿ ಮಹಾಪಾತ್ರ


ಭೀಮು ದಡ್ಡಿಮನಿ


ವಾಣಿ ವಿ.


ಅನುಶ್ರೀ ಎ.


ಅರ್ಚನ ಆರ್.


ರೇಖಾ ಪೂಜಾರಿ


ಪ್ರಿಯಾ ಎಂ.


ಜೀತ್.ವಿ. ಮ್ಯಾಥ್ಯು


ರಕ್ಷಿತ ಎಸ್.


ಗಾನಶ್ರೀ

## ನಿಮ್ಮ ಭವಿಷ್ಯ ಉಜ್ವಲವಾಗಿರಲಿ, ಅಭಿನಂದನೆಗಳು

* ಜೀವನದಲ್ಲಿ ಒಳ್ಳೆಯ ಭವಿಷ್ಯ ಉಂಟಾಗಬೇಕಾದರೆ, ಗೌರವವಾದ ಬಾಳ್ವಿಕೆ ಉಂಟಾಗಬೇಕಾದರೆ, ಕಾಲವನ್ನು ವ್ಯರ್ಥ ಮಾಡದೆ ಜ್ಞಾನ ಸಂಪಾದನೆ ಮಾಡಬೇಕು.

– ಮಹರ್ಷಿ ಯೋಗಿ ಅರವಿಂದ

ॐ

# ಅರ್ಪಣೆ



ಸ್ವರ್ಗೀಯ **ಅಜಿತ್‌ಕುಮಾರ್**
ನಿರ್ದೇಶಕರು, ಹಿಂದೂ ಸೇವಾ ಪ್ರತಿಷ್ಠಾನ
ಪ್ರೇರಕರು, ಶ್ರೀ ಮಂಗಳ ಶಿಕ್ಷಣ ಸಮಿತಿ (ರಿ)






ಶ್ರೀ ದರ್ಶನ್ ತಂಡದವರಿಂದ ಶಾಸ್ತ್ರೀಯ ಸಂಗೀತ



ಜಿಲ್ಲಾ ಮಟ್ಟದ ಕ್ರೀಡಾಕೂಟದಲ್ಲಿ ವಿಜೇತ ವಿದ್ಯಾರ್ಥಿಗಳು



ರಾಜ್ಯಮಟ್ಟದ ಚಿತ್ರಕಲಾ ಮತ್ತು ದೇಶ ಭಕ್ತಿ ಗೀತ ಗಾಯನ ಸ್ಪರ್ಧೆ